# ಹುಬ್ಬಳ್ಳಿಯ ಆ ಸೊಗಡು ಮರೆತರೆ ಹ್ಯಾಂಗ



## ಮಯೂರಿ

**ಕಲರ್ಸ್ ಕನ್ನಡದ 'ನನ್ನ ದೇವ್ರು' ನಾಯಕಿ**

◆ **ದೀರ್ಘ ವಿರಾಮದ ನಂತರ ಮತ್ತೆ ಕಿರುತೆರೆಯ ಪಯಣ ಹೇಗೆನಿಸುತ್ತಿದೆ?**

'ಅಶ್ವಿನಿ ನಕ್ಷತ್ರ'ದ ನಂತರ ಕಿರುತೆರೆಯ ಧಾರಾವಾಹಿಗೆ ಇದೇ ಮೊದಲು ಮಾಡುತ್ತಿದ್ದೇನೆ ಅನ್ನಬಹುದು. ಇಷ್ಟರ ನಡುವೆ 15 ಸಿನಿಮಾಗಳಲ್ಲಿ ನಟಿಸಿದ್ದೇನೆ. ತುಂಬ ದಿನಗಳ ನಂತರ ಅನ್ನಿಸಿದರೂ ನಾಯಕಿಯ ಪಾತ್ರ ನಿರ್ವಹಿಸುತ್ತಿದ್ದೇನೆ. ಅದರಲ್ಲೂ ವಿಶೇಷ ಏನೆಂದರೆ ಚಿಕ್ಕಹುಡುಗಿಯಾಗಿ ಕಾಣುವುದು ತುಂಬ ಖುಷಿ ಕೊಡುತ್ತಿದೆ. ಜನ ನನ್ನನ್ನು ಹಾಗೆಯೇ ನೋಡುತ್ತಿದ್ದಾರೆ. ಮೊದಲಿನ ಪ್ರೀತಿಯಿಂದಲೇ ಸ್ವೀಕರಿಸುತ್ತಿದ್ದಾರೆ. ಒಟ್ಟಾರೆ ಒಳ್ಳೆಯ ಪಾತ್ರ. ಒಬ್ಬ ನಟಿಯಾಗಿ ಇದನ್ನು ಸಂತೋಷದಿಂದ ಮಾಡುತ್ತಿದ್ದೇನೆ.

◆ **ನಿಮ್ಮ ದನಿಯಲ್ಲಿ ಹುಬ್ಬಳ್ಳಿಯ ಸೊಗಡು ಕೇಳುತ್ತಿಲ್ಲ ಅನ್ನಿಸುತ್ತಿದೆ. ಏಕೆ ಹೀಗೆ?**

ಮೂಲತಃ ನಾನು ಹುಬ್ಬಳ್ಳಿಯವಳು. ನಾನು ಎಲ್ಲೇ ಹೋದರೂ ಏನೇ ಮಾಡಿದರೂ ನನ್ನ ಮೂಲವನ್ನು ಮರೆಯಲು ಆಗುವುದಿಲ್ಲ. ಬೆಂಗಳೂರಲ್ಲೇ ಇದ್ದರೂ ನನ್ನ ಮನೆಯ ಮಾತು ನನ್ನೂರ ಕನ್ನಡವೇ. ನಮ್ಮ ಮಣ್ಣಿನ ಸೊಗಡು ನಿರಂತರ. ನಮ್ಮ ನೆಲ–ಮಣ್ಣು ಮರೆಯಲು ಸಾಧ್ಯ ಇಲ್ಲ.

◆ **'ಬಿಗ್‌ಬಾಸ್' ಸ್ಪರ್ಧೆಯ ದಿನಗಳನ್ನು ನೆನಪಿಸಬಹುದಾ?**

ನನಗೆ ಬೇರೆ ಬೇರೆ ಅನುಭವಗಳನ್ನು ನೋಡುವುದು ಇಷ್ಟ. ಆ ಸಮಯದಲ್ಲಿ ನನ್ನ ಕುಟುಂಬ ವರ್ಗ ಬೆನ್ನಿಗೆ ನಿಂತು ಸಹಕರಿಸಿತು. ಅದಕ್ಕೂ ಮೊದಲು 'ಬಿಗ್ ಬಾಸ್' ಸ್ಪರ್ಧಿಯಾಗಿ ನನಗೆ ಸಾಕಷ್ಟು ಬಾರಿ ಆಮಂತ್ರಣ ಬಂದಿತ್ತು. ಈ ಬಾರಿ ನೋಡೋಣ ಹೇಗಿರುತ್ತೆ ಅನುಭವಿಸಿ ನೋಡೋಣ ಎಂದು ಅನ್ನಿಸಿತು. ಹಾಗಾಗಿ ಒಪ್ಪಿಕೊಂಡಿದ್ದೆ. ಅದು ನನಗೂ ಭಾವುಕ ಕ್ಷಣದ ದಿನಗಳು. ತುಂಬ ಕಷ್ಟದ ಕಾಲವೂ ಹೌದು.

◆ **ನಿಮ್ಮನ್ನು ಕಾಡುವ ಒಂದು ಪಾತ್ರ ಯಾವುದು?**

ಎಲ್ಲ ಪಾತ್ರಗಳಲ್ಲಿಯೂ ಅಂತಹ ಅಂಶ ಇದ್ದೇ ಇರುತ್ತವೆ. ಯಾವುದೇ ಪಾತ್ರ ಇದ್ದರೂ ಅದನ್ನು ಮನಸಿಗೆ ಹಚ್ಚಿಕೊಂಡು ಮಾಡಿರುತ್ತೇನೆ. ಹಾಗೆ ಒಂದೇ ಪಾತ್ರವನ್ನು ಗುರುತಿಸಿ ಹೇಳಬೇಕು ಅನ್ನುವುದಾದರೆ. 'ಕರಿಯಾ 2' ಅದು ಹಿಂದಿಯಲ್ಲೂ ಡಬ್ ಆಯಿತು. ಅದನ್ನು ವೀಕ್ಷಕರು ತುಂಬ ಇಷ್ಟಪಟ್ಟಿದ್ದಾರೆ. ನನಗೆ ಅದು ಸ್ಮರಣೀಯವಾಗಲು ವೈಯಕ್ತಿಕ ಕಾರಣವೂ ಇದೆ. ಆಗಷ್ಟೇ ನಾನು ತಂದೆಯನ್ನು ಕಳೆದುಕೊಂಡಿದ್ದೆ. ತಂದೆಯ ಅಗಲಿಕೆಯ ನೋವಿನ ನಡುವೆ ಕರ್ಮಾಚರಣೆಯನ್ನು ಮುಗಿಸಿ ಕಾಯಕದ ಹೊಣೆಗಾರಿಕೆಗಾಗಿ ಬೆಂಗಳೂರಿಗೆ ಬಂದೆ. ಬಣ್ಣ ಹಚ್ಚಿದರೆ, ಚಿತ್ರದ ಕಥೆಯಲ್ಲೂ ನನ್ನ ತಂದೆ ತೀರಿಕೊಂಡಿದ್ದಾರೆ. ಅದು ಮರೆಯಲು ಸಾಧ್ಯವೇ ಇಲ್ಲ. ವಾಸ್ತವದಲ್ಲಿಯೂ ಹಾಗೆಯೇ ಆಗಿದ್ದರಿಂದ, ಮನಸಿಗೆ ಹತ್ತಿರವಾಗಿದ್ದಕ್ಕೋ ಏನೋ ಭಾವಪರವಶಳಾಗಿ ನಾನು ಅದರಲ್ಲಿ ತೊಡಗಿದ್ದೆ.

◆ **'ನನ್ನ ದೇವ್ರು' ಮಯೂರಿ ಪಾತ್ರದ ಬಗ್ಗೆ ಹೇಳುವುದಾದರೆ.**

ನಾನು ಇದರಲ್ಲಿ ಒಬ್ಬ ಹಳ್ಳಿಯ ಹುಡುಗಿ. ಬಡ ಕುಟುಂಬದಲ್ಲಿ ಬೆಳೆಯುತ್ತಿರುವ ಅನಾಥೆ. ಹಾಗೆಂದು ಅದು ಕರುಣೆ ಅಥವಾ ಸಿಂಪಥಿಯನ್ನು ಬಯಸುವ ಪಾತ್ರ ಅಲ್ಲ. ಸ್ವಾಭಿಮಾನದ ಹುಡುಗಿ ತುಂಬ ಒಳ್ಳೆಯ ಹುಡುಗಿ. ತಲೆ ಎತ್ತಿ ತಪ್ಪನ್ನು ಪ್ರಶ್ನಿಸುವ ದಿಟ್ಟಹುಡುಗಿಯಾಗಿದ್ದೇನೆ. ಎಲ್ಲಿ ಮಾತಾಡಬೇಕು ಅಲ್ಲಿ ಮಾತನಾಡುತ್ತಾಳೆ. ತುಂಬ ಚಿಕ್ಕ ಹುಡುಗಿ. ತನ್ನ ದಣಿಗಳನ್ನು ದೇವರ ಸ್ವರೂಪಿ ಎಂದು ಅಂದುಕೊಂಡಿದ್ದಾಳೆ. ಅದನ್ನು ಅಷ್ಟೇ ಗೌರವದಿಂದ ನೋಡುವ, ಅವರ ಸಲಹೆಯನ್ನು ಪಾಲಿಸುವ ಹುಡುಗಿ. ಇಂತಹ ಒಳ್ಳೆಯ ಪಾತ್ರವನ್ನು ತುಂಬ ಚಂದದಿಂದ ಹೆಣೆದಿದ್ದಾರೆ. ಕಥೆ ಕೂಡ ಅಷ್ಟೇ ಸೊಗಸಾಗಿದೆ.

■ **ರಾಘವೇಂದ್ರ ಕೆ.**